# ಪರಿಹಾರ ಬೋಧನೆ

- ಪೀಠಿಕೆ
- ಪರಿಹಾರ ಬೋಧನೆಯ ಅರ್ಥ / ಪರಿಕಲ್ಪನೆ
- ಪರಿಹಾರ ಬೋಧನೆಯ ಮಹತ್ವ
- ( H.S.C ) ಪ್ರೌಢಶಾಲಾ ಹಂತದ ಬೋಧನೆಯಲ್ಲಿ ಪರಿಹಾರ ಬೋಧನೆಯ ಪಾತ್ರ
- ಉಪಸಂಹಾರ

**ಡಾ. ಸವಿತಾ**

# ಪೀಠಿಕೆ:

ಸಾರ್ವಜನಿಕ ಶಿಕ್ಷಣ ಇಲಾಖೆಯ ಗುರಿಗಳು , ವಿವಿಧ ಚಟುವಟಿಕೆಗಳು ಸರ್ವ ಶಿಕ್ಷಣ ಅಭಿಯಾನದ 21 ಮುಖ್ಯ ಚಟುವಟಿಕೆಗಳು ಎಲ್ಲವೂ ಮಕ್ಕಳಿಗಾಗಿ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಅದರಲ್ಲಿ ಒಂದಾದ ಪರಿಹಾರ ಬೋಧನೆ ಇದು ಪ್ರಶ್ನೆವಾರು ವಿಶ್ಲೇಷಣೆ ಮಾಡುವಾಗ , ಅಂದರೆ ಮೌಲ್ಯಮಾಪನ ಹಂತದಲ್ಲಿ ಈ ಬೋಧನೆಗೆ ಒಂದು ಅರ್ಥ ಸಿಗುತ್ತದೆ . ಅವುಗಳಲ್ಲಿ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ವ್ಯಕ್ತಿಗತವಾಗಿ ವಿದ್ಯಾರ್ಥಿಗಳ ಸಾಧನೆಯ ಪ್ರಮಾಣ ಹಾಗೂ ದೌರ್ಬಲ್ಯಗಳನ್ನು ಗುರ್ತಿಸಿ ಸಾಧನೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಪರಿಹಾರ ಬೋಧನೆಯಲ್ಲಿ ಉತ್ತಮಪಡಿಸಬಹುದು . ಇದು ಮಗುವಿನ ಉನ್ನತಿಗೆ ರಹದಾರಿ ಆಗಿದೆ .

# ಪರಿಹಾರ ಬೋಧನೆಯ ಅರ್ಥ ಮತ್ತು ಪರಿಕಲ್ಪನೆ

ಪರಸ್ಪರ ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಬಗೆಗಿನ ಕಲಿಸುವಿಕೆ ಹಾಗೂ ಕಲಿಯುವಿಕೆಗೆ ಸಂಬಂಧಿಸಿದಂತೆ ಅದರ ತೊಂದರೆಗಳನ್ನು ತಿಳಿದುಕೊಂಡು ಆ ತೊಂದರೆಯ ಪರಿಹಾರದ ಸಲುವಾಗಿ ಕೈಗೊಳ್ಳುವ ವಿಧಾನವನ್ನು ಪರಿಹಾರ ಬೋಧನೆ ಎಂದು ಕರೆಯಲಾಗುತ್ತದೆ . ಅಲ್ಲದೆ ಯಾವುದೇ ವಿಷಯವನ್ನು ಪುನಃ ಬೋಧನೆ ಮಾಡುವುದಕ್ಕೆ ಕನ್ನಡ ಭಾಷಾ ಶಿಕ್ಷಕರ ಕೈಪಿಡಿ ಪರಿಹಾರ ಬೋಧನೆ ಎನ್ನುವರು.

## ಪರಿಹಾರ ಬೋಧನೆಗಿಂತ ಮೊದಲು :

**ಕನಿಷ್ಟ ಅಂಕ ಪಡೆದ ವಿದ್ಯಾರ್ಥಿಗಳ ಅಂಕಪಟ್ಟಿ**


| ಕ್ರಮ ಸಂಖ್ಯೆ | ವಿದ್ಯಾರ್ಥಿಗಳ ಹೆಸರು | ಗರಿಷ್ಟ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಭಾರ್ಗವಿ | 25 | 10 |
| 2 | ವಸಂತ | 25 | 8 |
| 3 | ಮಹೇಶ | 25 | 8 |
| 4 | ಮಾರ್ಗೇಶ | 25 | 7 |
| 5 | ಬದರಿನಾಥ | 25 | 8 |



# ಪರಿಹಾರ ಬೋಧನೆಯ ನಂತರ :

## ಪರಿಹಾರ ಬೋಧನೆಯ ನಂತರ ಪಡೆದ ಅಂಕಪಟ್ಟಿ

| ಕ್ರಮ ಸಂಖ್ಯೆ | ವಿದ್ಯಾರ್ಥಿಗಳ ಹೆಸರು | ಗರಿಷ್ಟ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಭಾರ್ಗವಿ | 25 | 15 |
| 2 | ವಸಂತ | 25 | 16 |
| 3 | . ಮಹೇಶ | 25 | 10 |
| 4 | ಮಾರ್ಗೇಶ | 25 | 12 |
| 5 | ಬದರಿನಾಥ | 25 | 10 |




fppt.com



# ಈ ಕೆಳಗಿನ ಅಂಶಗಳಿಂದ ಪರಿಹಾರಾತ್ಮಕ ಬೋಧನೆಯನ್ನು ಕೈಗೊಳ್ಳಬಹುದು:

1)ಶಿಕ್ಷಕರ ಬೋಧನೆಯಲ್ಲಿನ ಕುಂದುಕೊರತೆಗಳನ್ನು ಸೂಕ್ತವಾದ ಬೋಧನಾ ತಂತ್ರಗಳನ್ನು ಬೋಧನಾ ವಿಧಾನಗಳನ್ನು ಹಾಗೂ ಪೀಠೋಪಕರಣಗಳನ್ನು ಬಳಸಿ ಪರಿಹಾರಾತ್ಮಕ ಬೋಧನೆಯನ್ನು ಕೈಗೊಳ್ಳಬಹುದು .

2)ಶಾಲಾ ವಿಷಯಗಳಲ್ಲಿ ತೊಂದರೆಗಳನ್ನು ತಿಳಿದು ಸೂಕ್ತವಾದ ಪಠ್ಯ ವಿಷಯಗಳನ್ನು ಅಳವಡಿಸುವುದು.

3) ಮುಕ್ತ ಸಹಚರ್ಯ ತಂತ್ರದಿಂದ ವಿದ್ಯಾರ್ಥಿಗಳ ವೈಯಕ್ತಿಕ ಕುಂದುಕೊರತೆಗಳನ್ನು ಕಂಡುಕೊಂಡು ಅವುಗಳಿಗೆ ಪರಿಹಾರಾತ್ಮಕ ಅಂಶಗಳನ್ನು ಸೂಚಿಸುವುದು.

4) ವರ್ಗವಣೆಯಲ್ಲಿ ಶಿಕ್ಷಕರು ತಾವು ಬೋಧಿಸಿದ ವಿಷಯದ ಬಗ್ಗೆ ಮೌಖಿಕವಾಗಿ ಪ್ರಶ್ನೆಗಳನ್ನು ಕೇಳುವುದರಿಂದ ವಿದ್ಯಾರ್ಥಿಗಳಲ್ಲಿಯ ಕುಂದುಕೊರತೆಗಳನ್ನು ತಿಳಿದು ಅವಳಿಗೆ ಪರಿಹಾರವನ್ನು ಸೂಚಿಸಬಹುದು

5) ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಗಳನ್ನು ಏರ್ಪಡಿಸುವುದರಿಂದ ಅವರಲ್ಲಿಯ ' ತೊಂದರೆಗಳನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬಹುದು .



# ಪರಿಹಾರ ಬೋಧನೆಯಗುಣಗಳು ಮತ್ತು ಮಹತ್ವ ಗುಣಗಳು:

1 ) ಬೋಧನೆಯನ್ನು ಸುಧಾರಿಸಲು ಪರಿಹಾರ ಬೋಧನೆ ಸಹಾಯಕವಾಗಿದೆ .

2 ) ಪರಿಹಾರ ಬೋಧನೆಯು ಉತ್ತಮ ಕಲಿಕೆಯನ್ನು ಸ್ಪಷ್ಟಗೊಳಿಸುತ್ತದೆ .

3 ) ಶಿಕ್ಷಕರ ದಕ್ಷತೆ ಹೆಚ್ಚಿಸುವುದು .

4 ) ಮಂದ ಕಲಿಕೆಯ ವಿದ್ಯಾರ್ಥಿಗಳಿಗೆ ಹೆಚ್ಚು ಸೂಕ್ತ

5 ) ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಪರಿಣಾಮಕಾರಿಗೊಳಿಸುವುದು .

6 ) ಪರಿಹಾರಾತ್ಮಕ ಬೋಧನೆ ಉದ್ದೇಶಗಳನ್ನು ಸ್ಪಷ್ಟಗೊಳಿಸುತ್ತದೆ .

7 ) ಮೌಲ್ಯಮಾಪನ ಮಾಡಲು ಸರಿಯಾದ ತಂತ್ರಗಳನ್ನು ಪರಿಹಾರತ್ಮಕ ಬೋಧನೆ ನೀಡುವುದು .

## ಪರಿಹಾರ ಬೋಧನೆಗೆ ಯಶಸ್ಸು ಸಿಗಬೇಕಾದರೆ ಪರೀಕ್ಷೆಗಳನ್ನು ರಚಿಸುವ ಹಂತಗಳು ಪ್ರಮುಖ ಪಾತ್ರವಹಿಸುತ್ತವೆ . ಅವುಗಳು

**1 ) ಪರೀಕ್ಷೆಗಳನ್ನು ಯೋಜಿಸುವುದು.**

ಅ ) ಸಮಸ್ಯೆಗಳನ್ನು ಕಲ್ಪಿಸುವುದು .

ಆ ) ಉದ್ದೇಶಗಳನ್ನು ಹೇಳುವುದು.

ಇ ) ಪ್ರಶ್ನೆಗಳನ್ನು ಬರೆಯುವುದು .

**2 ) ಪರೀಕ್ಷೆಯನ್ನು ನಡೆಸುವುದು**

ಅ ) ದೌರ್ಬಲ್ಯಗಳನ್ನು ಗುರುತಿಸುವುದು.

ಆ ) ದೌರ್ಬಲ್ಯಗಳನ್ನು ವರ್ಗೀಕರಿಸುವುದು.

**3 ) ಚಿಕಿತ್ಸಕ ಬೋಧನೆ**

ಆ ) ದೌರ್ಬಲ್ಯಗಳನ್ನು ಸರಿಪಡಿಸುವುದು.

ಆ ) ಮೌಲ್ಯಮಾಪನ

ಇವೆಲ್ಲವುಗಳು ಕರಾರುವಕ್ಕಾಗಿ ಮಾಡಿದಾಗಲೇ ಪರಿಹಾರ ಬೋಧನೆ ಮಾಡಲು ಯಶಸ್ಸುಗೊಳಿಸಲು ಸಾಧ್ಯ.

# ( H.S.C. ) ಪ್ರೌಢಶಾಲಾ ಹಂತದ ಬೋಧನೆಯಲ್ಲಿ ಪರಿಹಾರ ಬೋಧನೆಯ ಪಾತ್ರ:

ಪ್ರೌಢಶಾಲಾಹಂತದ ಬೋಧನೆಯಲ್ಲಿ ಪರಿಹಾರ ಬೋಧನೆಯ ಪಾತ್ರ ಅತಿ ಹಿರಿದು . ಅದನ್ನು ನಾವು ಈ ರೀತಿ ವಿಶ್ಲೇಷಿಸಬಹುದು .

ಸಾರ್ವಜನಿಕ ಶಿಕ್ಷಣ ಇಲಾಖೆಯ ಗುರಿಗಳನ್ನು ಅವಲೋಕಿಸಿದಾಗ ಈ ಕೆಳಕಂಡ ವಿಚಾರಗಳು ಹೊರಹಮುವುದು .

- ಸರ್ವರಿಗೂ ಸಾಮಾನ್ಯ ಶಿಕ್ಷಣ ನೀಡುವುದು .
- 100 % ಮಕ್ಕಳ ಹಾಜರಾತಿ ಮತ್ತು ದಾಖಲಾತಿಗಳನ್ನು ಖಚಿತಪಡಿಸುವುದು .
- ಶಾಲೆಯ ಪ್ರತಿ ತರಗತಿಗಳಲ್ಲಿ ಮಕ್ಕಳ ಉಳಿಯುವಿಕೆಯನ್ನು ತಡೆಗಟ್ಟುವುದು .
- ಮಧ್ಯಾಹ್ನ ಉಪಹಾರ ಯೋಜನೆ , ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಸರ್ವರಿಗೂ ವಿಸ್ತರಿಸುವ ಕಾರ ಯೋಜನೆಯ ನಿರ್ವಹಣೆ
- ಗುಣಮಟ್ಟದ ಶಿಕ್ಷಣವನ್ನು ಕಾಯ್ದುಕೊಳ್ಳುವುದು ಮತ್ತು ಕಾರ್ಯಕ್ರಮದ ಸಫಲತೆಯನ್ನು ಮೌಲ್ಯೀಕರಿಸಬಹುದು .



# ಸಾರ್ವಜನಿಕ ಶಿಕ್ಷಣ ಇಲಾಖೆ ಕೆಲವು ಚಟುವಟಿಕೆಗಳನ್ನು ಹಮ್ಮಿಕೊಂಡಿದೆ :

1 ) ಉಚಿತ ಪಠ್ಯಪುಸ್ತಕ ವಿತರಣೆ

2 ) ಉಚಿತ ಸಮವಸ್ತ್ರ ವಿತರಣೆ

3 ) ಪರಿಶಿಷ್ಟ ಜಾತಿ ( ಪರಿಶಿಷ್ಟ ಪಂಗಡದ ಮಕ್ಕಳಿಗೆ )

4 ) ಬೈಸಿಕಲ್ ವಿತರಣೆ

5 ) ಮಧ್ಯಾಹ್ನದ ಉಪಹಾರ ಯೋಜನೆ

6 ) ಸರ್ವ ಶಿಕ್ಷಣ ಅಭಿಯಾನದ 21 ಮುಖ್ಯ ಚಟುವಟಿಕೆ

1 ) ಹೊಸ ಪ್ರಾಥಮಿಕ ಶಾಲೆಗಳು

2 ) ಹೊಸ ( ಉನ್ನತೀಕರಿಸಿದ ಶಾಲೆಗಳಿಗೆ ಶಿಕ್ಷಕರು )

3) ಶಿಕ್ಷಕರ ಅನುದಾನ

4 ) ಬಿ , ಆರ್.ಸಿ ,

5 ) h , ಆರ್.ಸಿ ,

6 ) ಶಿಕ್ಷಕರ ತರಬೇತಿ

7 ) ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರಗಳು

8 ) ಪರಿಹಾರ ಬೋಧನೆ

9) ಉಚಿತ ಪಠ್ಯ ಪುಸ್ತಕ

10 ) ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ ಸಮನ್ವಯ ಶಿಕ್ಷಣ

11 ) ಸಿವಿಲ್ ಕಾಮಗಾರಿಗಳು

12 ) ಪೀಠೋಪಕರಣಗಳು ಉನ್ನತೀಕರಿಸುವ ಶಾಲೆಗಳಿಗೆ

13 ) ಹೊಸ ಹಾಗೂ ಉನ್ನತಿಕರಿಸಿದ ಶಾಲೆಗಳಿಗೆ ಕಲಿಕಾ ಸಾಮಗ್ರಿ

14 ) ನಿರ್ವಹಣಾ ಅನುದಾನ

15 ) ಶಾಲಾ ಅನುದಾನ

## ಉಪಸಂಹಾರ :

ಈ ಒಂದು ಪರಿಹಾರ ಬೋಧನೆಯಿಂದ ಮಕ್ಕಳಿಗೆ ತಿಳಿಯದ ವಿಷಯವನ್ನು ನಾವು ಪುನಃ ತಿಳಿಸಲು ಇದರಿಂದ ಶಿಕ್ಷಕರಿಗೂ ಅನುಕೂಲ , ವಿದ್ಯಾರ್ಥಿಗಳಿಗೆ ಉತ್ತಮವಾಗಿ ಅವರ ಕಲಿಕಾ ಪ್ರಕ್ರಿಯೆ ಉತ್ತಮಗೊಳ್ಳುತ್ತದೆ .